**ದಿನಾಂಕ 23.08.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ– ಶ್ರೀ ಸಿ.ಆರ್. ಪ್ರತಿವಾದಿ ಪರ ವಕೀಲರಿಂದಃ**

ಸರ್ವೆ ನಂಬರ್ 39 ರ ಜಮೀನು ಪೋಡು ಆಗಿರುವುದಿಲ್ಲ. ಸರ್ವೆ ನಂಬರ್ ನಲ್ಲಿ ಒಟ್ಟು 2 ಎಕರೆ ಜಮೀನು ಇರಬಹುದು. ಸರ್ವೆ ನಂಬರ್ 39 ರಲ್ಲಿ ನಮ್ಮ ಜಾಗವನ್ನು ನಾನು ಗುರುತಿಸುತ್ತೇನೆ. ಸರ್ವೆ ನಂಬರ್ 39 ರಲ್ಲಿ ದಾವಾ ಸ್ವತ್ತನ್ನು ಗುರುತಿಸಬಹುದಾದ ಯಾವುದೇ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೂಲ ಮಾಲೀಕರ ಹೆಸರುಗಳು ಹಾಗೂ ಅವರು ಮಾರಾಟ ಮಾಡಿರುವ ಕ್ರಯದಾರರುಗಳ ಹೆಸರು ನನಗೆ ಗೊತ್ತಿಲ್ಲ ಸಾಕ್ಷಿಯು ಮುಂದುವರೆದು ನಾವು ನಾಗನಂಜುಂಡಗುಪ್ತ ರವರಿಂದ ಖರೀದಿ ಮಾಡಿರುತ್ತೇವೆ, ಸದರಿಯವರು ವೀರಭದ್ರಯ್ಯನವರಿಂದ ಖರೀದಿ ಮಾಡಿರುತ್ತಾರೆ ಆದರೆ ಅವರ ಹಿಂದಿನ ಮಾಲೀಕರ ಹೆಸರು ನನಗೆ ಗೊತ್ತಿಲ್ಲ.

ನಿಪಿ–8 ರ ದಾಖಲೆ ನಮ್ಮ ಸೈಟಿಗೆ ಸಂಬಂಧಪಟ್ಟ ದಾಖಲೆಯಾಗಿರುತ್ತದೆ. ನಿಪಿ–9 ರ ದಾಖಲೆಯು ಯಾವ ಸ್ವತ್ತಿಗೆ ಸಂಬಂಧಪಟ್ಟಿರುವುದು ಎಂಬುದಾಗಿ ನನಗೆ ಗೊತ್ತಿಲ್ಲ. ನಿಪಿ–8ರ ದಾಖಲೆಯನ್ನು ಯಾರು ಯಾರ ಪರವಾಗಿ ಬರೆದುಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ–2 ರ ಕ್ರಯಪತ್ರಕ್ಕೆ ಕೋದಂಡರಾಮ, ರಾಜಪ್ಪ ಮತ್ತು ತಿಮ್ಮಯ್ಯರವರು ಸಾಕ್ಷಿಗಳಾಗಿರುತ್ತಾರೆ. ಕೋದಂಡರಾಮ ಮತ್ತು ತಿಮ್ಮಯ್ಯರವರು ನನಗೆ ಪರಿಚಯವಿರುತ್ತಾರೆ. ಸದರಿರವರುಗಳು ಕೊಳ್ಳೇಗಾಲದ ವಾಸಿಗಳಾಗಿರುತ್ತಾರೆ. ನಿಪಿ–2ರ ಕ್ರಯಪತ್ರವನ್ನು ಯಾರು ಬೆರಳಚ್ಚು ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಯಜಮಾನರು ಮಾಡಿಸಿರುತ್ತಾರೆ ಯಾರ ಬಳಿ ಮಾಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮೇಲೆ ಹೇಳಿದ ಸಾಕ್ಷಿದಾರರು ಉಪನೋಂದಣಾಧಿಕಾರಿಗಳ ಕಚೇರಿಗೆ ಬಂದಿದ್ದರು. ನಿಪಿ–2 ರ ಕ್ರಯಪತ್ರದ ನೋಂದಣಿ ಸಮಯದಲ್ಲಿ ಯಾರ ಯಾರ ಭಾವಚಿತ್ರವನ್ನು ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ–2 ರ ಕ್ರಯಪತ್ರ ಬರೆಯಲು ಸ್ಟ್ಯಾಂಪ್ ಗಳನ್ನು ನನ್ನ ಗಂಡ ತಂದಿರುತ್ತಾರೆ. ನಿಪಿ–2 ರಲ್ಲಿ ಸಾಕ್ಷಿಗಳು ಉಪನೋಂದಣಾಧಿಕಾರಿಗಳ ಮುಂದೆ ಸಹಿ ಮಾಡಿರುತ್ತಾರೆ. ನಾಗನಂಜುಂಡಗುಪ್ತ ರವರು ಯಾವುದೇ ಕ್ರಯಪತ್ರವನ್ನು ನಮಗೆ ಬರೆದುಕೊಡದೇ ಇದ್ದರೂ ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನಿಪಿ–2ರ ಕ್ರಯಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾಗನಂಜುಂಡಗುಪ್ತರವರಿಗೆ ನಮ್ಮ ಪರ ಕ್ರಯ ಮಾಡಲು ಯಾವುದೇ ಹಕ್ಕು, ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

ನಿಪಿ–7ರ ದೂರಿನ ಹಿಂಬರಹವನ್ನು ಪ್ರತಿವಾದಿಗಳು ನಾವು ನಮ್ಮ ಸ್ವತ್ತನ್ನು ಸ್ವಚ್ಛ ಮಾಡುತ್ತಿದ್ದ ಸಮಯದಲ್ಲಿ ನಮ್ಮ ವಿರುದ್ಧ ಜಗಳ ಮಾಡಿದಾಗ ನೀಡಿರುತ್ತೇನೆ. ಪ್ರತಿವಾದಿಗಳ ವಿರುದ್ಧ ನಾವು ನೀಡಿದ್ದ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ